# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್‌ಸಿ.* 258/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಕುಮಾರ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಸಿದ್ದೇಗೌಡ | | **23.07.2024** |
| **ವಯಸ್ಸು** | ಃ **62** **ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **02** |
| **ವಾಸಸ್ಥಳ** | ಃ ಕೆರೆತೋಣ್ಣುರು | **ಚಾ.ಸಾ.** | ಃ **06** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-*1* ರಾಮೇಗೌಡ ಮತ್ತು ಅವರ ಹೆಂಡತಿ ಮೃತ ಮಮತಾ ಇವರ ಪರಿಚಯ ಇದೆ. ದಿಃ*25.05.2023* ರಂದು ಮೃತ ಮಮತಾ ಇವರ ಕೊಲೆಯಾಗಿತ್ತು. ಆ ಕಾಲಕ್ಕೆ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮೃತ ಮಮತಾ ಇವರ ಶವ ಮಹಜರ್ ಮಾಡಿದ್ದರು. ಆ ಕಾಲಕ್ಕೆ ನಾನು ಶವಾಗಾರದ ಬಳಿ ಹೋದಾಗ ನನ್ನ ಸಮಕ್ಷಮ ಶವ ಮಹಜರ್ ಮಾಡಿದ್ದರು. ಹಣಕಾಸಿನ ವಿಚಾರಕ್ಕೆ ಮಮತಾ ಇವರನ್ನು ಒಬ್ಬ ಬೇಕರಿ ನಡೆಸುತ್ತಿದ್ದ ವ್ಯಕ್ತಿ ಕೊಲೆ ಮಾಡಿದ್ದಾನೆ ಎಂದು ಗೊತ್ತಾಗಿತ್ತು ಆದರೆ ಆತನ ಹೆಸರು ಈಗ ನೆನಪಿಲ್ಲ. ಮಮತಾ ಇವರಿಗೆ ತಲೆಗೆ ಮತ್ತು ಕಿವಿಯ ಮೇಲ್ಬಾಗಕ್ಕೆ ಗಾಯಗಳಾಗಿದ್ದವು. ಆ ಶವ ಮಹಜರ್ ಗೆ ನಾನು ಸಹಿ ಹಾಕಿದ್ದೆ. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ-*3* ಮತ್ತು ಸಹಿಯನ್ನು ನಿ.ಪಿ-*3(*ಎ*)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಪೊಟೋಗಳನ್ನು ಆ ಶವ ಮಹಜರ್ ಕಾಲಕ್ಕೆ ತೆಗೆದಿದ್ದರು. ಸದರಿ ಪೊಟೋಗಳನ್ನು ನಿಪಿ-*4* ಮತ್ತು *5* ಎಂದು ಗುರುತಿಸಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ-**

*2.* ರಾಮೇಗೌಡರು ಮತ್ತು ಆತನ ಹೆಂಡತಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ರಾಮೇಗೌಡರು ನಮ್ಮ ಊರಿನವರು ಇರುವ ಕಾರಣ ನನಗೆ ಬುದ್ದಿ ತಿಳಿದಾಗಿನಿಂದಲೂ ಅವರ ಪರಿಚಯ ಇದೆ. ಮೃತ ಮಮತಾ ನಮ್ಮ ಗ್ರಾಮದ ಅಂಗನವಾಡಿಯಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಅವರಿಗೆ ಅಂಗನವಾಡಿ ಕೆಲಸದಿಂದ ಮತ್ತು ವ್ಯವಸಾಯದಿಂದ ಆದಾಯ ಬರುತ್ತಿತ್ತು ಬೇರೆ ಆದಾಯ ಇರಲಿಲ್ಲ. ನಿ.ಪಿ-*3* ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ-*3* ರಲ್ಲಿನ ನನ್ನ ಸಹಿಯನ್ನು ಪೋ.ಠಾಣೆಯಲ್ಲಿ ಮಾಡಿದ್ದೆ ಎಂದರೆ ನಿಜ. ನಿ.ಪಿ-*3* ಕ್ಕೆ ನಾನು, ವಿಜಯಲಕ್ಷ್ಮಿ ಮತ್ತು ಸೋಮಶೇಖರ ಸಹಿ ಮಾಡಿದ್ದೇವೆ. ಮಮತಾ ಇವರು ಯಾವ ಕಾರಣಕ್ಕೆ ಮರಣಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ರಾವೇಗೌಡರು ನಮ್ಮ ಗ್ರಾಮದವರೇ ಇರುವ ಕಾರಣಕ್ಕೆ ಪೋ.ಠಾಣೆಯಲ್ಲಿ ಸಹಿ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಲೆಯಾದ ಕಾಲಕ್ಕೆ ಮಮತಾ ಇವರು ಬೇಕರಿ ನಡೆಸುತ್ತಿದ್ದ ವ್ಯಕ್ತಿಗೆ ಹಣ ಕೊಟ್ಟಿದ್ದಾರೆ ಎಂದು ಗೊತ್ತಾಗಿತ್ತು. ಆ ಘಟನೆಗಿಂತ ಮೊದಲು ನನಗೆ ಆ ಹಣಕಾಸಿನ ವ್ಯವಹಾರದ ಬಗ್ಗೆ ಗೊತ್ತಿಲ್ಲ. ರಾಮೇಗೌಡರು ಒತ್ತಡ ಹಾಕಿ ನನ್ನ ಮೂಲಕ ಸುಳ್ಳು ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ರಾಮೇಗೌಡ ಮತ್ತು ಆತನ ಹೆಂಡತಿ ನಡುವೆ ಸಂಬಂದ ಚೆನ್ನಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಈ ದಿನ ರಾಮೇಗೌಡರೇ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ನಿಜ. ರಾಮೇಗೌಡರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು